ಓಎಸ್. 15/2019
ಪಿಡಬ್ಲ್ಯೂ-1

ದಿನಾಂಕ 11.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ- 6 ನೇ ಪ್ರತಿವಾದಿ ಪರ ವಕೀಲರಿಂದಃ-

19. ವಾದಿಗಳು ಮತ್ತು 1 ರಿಂದ 4, 6 ನೇ ಪ್ರತಿವಾದಿಗಳು ಪೊಕ್ಕಳಚಂಡ ಕುಟುಂಬಕ್ಕೆ ಸೇರಿದವರು ಎಂದರೆ ಸರಿ. ಈ ದಾವೆಯಲ್ಲಿ ವಂಶವೃಕ್ಷ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೇನೆ. ಪೊಕ್ಕಳಚಂಡ ಮಾಚಯ್ಯನವರ ಮೂರು ಗಂಡು ಮಕ್ಕಳಲ್ಲಿ ಮೊಣ್ಣಯ್ಯ ಎಂಬ ಮಗ ಇರುವುದಿಲ್ಲ ಅವರ ದೇವಯ್ಯ ಎಂದರೆ ಸರಿ. ಪೊಕ್ಕಳಚಂಡ ಕುಟುಂಬಕ್ಕೆ ಸಂಬಂಧಪಟ್ಟ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ನಮ್ಮ ಭಾಗಕ್ಕೆ ಬಂದ ಆಸ್ತಿಗಳನ್ನು ಮಾತ್ರ ಸೇರಿಸಿರುತ್ತೇವೆ ಎಂದು ನುಡಿಯುತ್ತಾರೆ. ದಾವಾಸ್ತಿಯಲ್ಲಿ ನಮ್ಮ ಕುಟುಂಬದ ಮಾಚಯ್ಯನವರಿಗೆ ಮಾತ್ರವಲ್ಲದೆ ಬೇರೆ ವಿಭಾಗದ ಕುಟ್ಟಪ್ಪ ಹಾಗೂ ಕಾಳಪ್ಪನವರ ವಾರಸುದಾರರಿಗೂ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಕುಟ್ಟಪ್ಪ ಹಾಗೂ ಕಾಳಪ್ಪನವರ ವಾರಸುದಾರರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

20. ದಾವಾಸ್ತಿಯು ಮಾಚಯ್ಯರವರ ಭಾಗಕ್ಕೆ ಬಂದಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಮಾಚಯ್ಯನವರ ಆಸ್ತಿಯನ್ನು ಅವರ ಮೂರು ಗಂಡು ಮಕ್ಕಳ ನಡುವೆ ಆಗಿರುವ ವಿಭಾಗದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನನ್ನ ಅಜ್ಜ ಮಾಚಯ್ಯನವರ ಪಾಲಿಗೆ ಎಷ್ಟು ಆಸ್ತಿ ಬಂದಿರುತ್ತದೆ ಎಂದರೆ ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಅಜ್ಜನ ಸ್ವಾಧೀನದಲ್ಲಿ ಅಂದಾಜು 4 ರಿಂದ 5 ಎಕರೆ ಜಮೀನು ಇತ್ತು. ದಾವಾಸ್ತಿಯಲ್ಲಿ ಮಾಚಯ್ಯರವರ ಮೂರು ಮಕ್ಕಳಿಗೂ ಸಹ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

21. 5 ನೇ ಪ್ರತಿವಾದಿಯ ಹೆಂಡತಿ ಮಾಚಯ್ಯರವರ ಮಗನಾದ ದೇವಯ್ಯನವರ ಮಗಳು ಎಂದರೆ ಸರಿ. ಅವರು ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ಆದ್ದರಿಂದ ಅವರ ಗಂಡನನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುತ್ತೇವೆ ಎಂದರೆ ಸರಿ. 5 ನೇ ಪ್ರತಿವಾದಿಯ ಹೆಂಡತಿ ಚೋಂದಮ್ಮರವರು ಜೀವಂತವಾಗಿದ್ದಾಗ ದಾವಾಸ್ತಿಯ 1 ಎಕರೆ ಜಮೀನನ್ನು ನಾಣಯ್ಯ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದೇವಯ್ಯರವರಿಗೆ ಚೋಂದಮ್ಮರವರು ಒಬ್ಬರೇ ಮಗಳು

ಎಂದರೆ ಸರಿ. ದೇವಯ್ಯರವರಿಗೆ ಗಂಡು ಮಕ್ಕಳು ಇರುವುದಿಲ್ಲ ಎಂದರೆ ಸರಿ. ಚೋಂದಮ್ಮರವರು ತನ್ನ ತಂದೆಯ ಪಾಲಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಾಣಯ್ಯರವರು ಮತ್ತು ಅವರ ತಂದೆ ಕಾರ್ಯಪ್ಪರವರು ದಿನಾಂಕ 20.07.1998 ರಂದು ಪೊಕ್ಕಳಚಂಡ ಕಾಳಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ದಾಖಲಾತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು 15.07.2002 ರಂದು ಪೊಕ್ಕಳಚಂಡ ಕಾಳಪ್ಪರವರು 6 ನೇ ಪ್ರತಿವಾದಿಯ ತಂದೆ ಕುಟ್ಟಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ದಾಖಲಾತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ನಾಣಯ್ಯ, ಕಾಳಪ್ಪ ಹಾಗೂ ಕುಟ್ಟಪ್ಪರವರು ನಂಬಿಕೆಗೆ ಅರ್ಹ ಖರೀದಿದಾರರು ಎಂದರೆ ಗೊತ್ತಿಲ್ಲ.

22. ಕಾಳಪ್ಪರವರಿಂದ ಆಸ್ತಿ ಖರೀದಿ ಮಾಡಿದ ಕುಟ್ಟಪ್ಪರವರು ಈಗ ಜೀವಂತವಾಗಿರುವುದಿಲ್ಲ ಎಂದರೆ ಸರಿ. ಅವರಿಗೆ ಇಬ್ಬರು ಗಂಡು ಮಕ್ಕಳು ಎಂದರೆ ಗೊತ್ತಿಲ್ಲ. ಅವರ ಮಗ ಪಿ.ಕೆ.ಪೊನ್ನಪ್ಪ ಹಾಗೂ ಪಿ.ಕೆ.ಸುಬ್ಬಯ್ಯ ಎಂದರೆ ಗೊತ್ತಿಲ್ಲ. ಪಿ.ಕೆ.ಪೊನ್ನಪ್ಪರವರು ಈ ದಾವೆಯ 6 ನೇ ಪ್ರತಿವಾದಿ ಎಂದರೆ ಸರಿ. ಪಿ.ಕೆ.ಸುಬ್ಬಯ್ಯ ರವರು ಜೀವಂತವಾಗಿರುವುದಿಲ್ಲ ಎಂದರೆ ಗೊತ್ತಿಲ್ಲ. ಅವರ ಹೆಂಡತಿ ಪಿ.ಎಸ್.ಶಾಂತಿ ಈ ದಾವೆಯ ಪಕ್ಷಗಾರರಲ್ಲ ಎಂದರೆ ಸರಿ. ಈ ದಾವೆಯಲ್ಲಿ ವಂಶವೃಕ್ಷವನ್ನು ಹಾಜರುಪಡಿಸದೆ, ಎಲ್ಲಾ ಕುಟುಂಬದ ಸದಸ್ಯರುಗಳನ್ನು ಪಕ್ಷಗಾರರನ್ನಾಗಿ ಮಾಡದೆ ಹಾಗೂ ಕುಟುಂಬದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದೆ ಇರುವುದರಿಂದ ದಾವೆಯು ದೋಷಪೂರಿತವಾಗಿರುತ್ತದೆ ಎಂದರೆ ಸರಿಯಲ್ಲ. ದಾವೆಯಲ್ಲಿ ನಮಗೆ ಎಷ್ಟು ಪಾಲು ಬರಬೇಕು ಎಂದು ನಿಖರವಾಗಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಸ್ಥರಿಗೆ ನನಗೆ ಪಾಲು ಬೇಕು ಎಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವೆಯನ್ನು ಸಲ್ಲಿಸಲು ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

23. ನಿಪಿ-3 ರಂತೆ ದಾವಾಸ್ತಿಯು ಕಾಕೇರ, ಚೂರೀರ ಹಾಗೂ ಕೊರಕುಟ್ಟೀರ ಮತ್ತು ಪೊಕ್ಕಳಚಂಡ ಕುಟುಂಬಕ್ಕೆ ಸೇರಿದ ಜಂಟಿ ಆಸ್ತಿ ಎಂದರೆ ಸಾಕ್ಷಿಯು ಜಂಟಿ ಖಾತೆ ಇರುತ್ತದೆ, ಇತರರಿಗೆ ಹಕ್ಕು ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವೆಯಲ್ಲಿ ನನ್ನ ತಂದೆ ಎಷ್ಟು ಪಾಲು ಬರಬೇಕು ಮತ್ತು ನನ್ನ ತಮ್ಮನಿಗೆ ಎಷ್ಟು ಪಾಲು ಬರಬೇಕು ಎಂದು ತೋರಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಸ್ವಾಧೀನದಲ್ಲಿ ದಾವಾಸ್ತಿಯು ಎಷ್ಟು ಇರುತ್ತದೆ

ಹಾಗೂ ಪೊಕ್ಕಳಚಂಡ ಕುಟುಂಬದಿಂದ ಬಂದ ಆಸ್ತಿಗಳು ಎಷ್ಟು ಸ್ವಾಧೀನದಲ್ಲಿರುತ್ತವೆ ಎಂದರೆ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ದಾವಾಸ್ತಿಯಲ್ಲಿ 1 ಎಕರೆ ನನ್ನ ಸ್ವಾಧೀನದಲ್ಲಿರುವುದಾಗಿ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ಅದರ ಸರ್ವೆ ನಂ.33 ಆಗಿದ್ದು ಅದು ಇನ್ನು ವಿಂಗಡಣೆಯಾಗಿರುವುದಿಲ್ಲ. ಸದರಿ ಆಸ್ತಿಯು 6 ನೇ ಪ್ರತಿವಾದಿಯ ಆಸ್ತಿಯ ಪಕ್ಕದಲ್ಲಿರುತ್ತದೆ ಎಂದರೆ ಸರಿ.

24. 6 ನೇ ಪ್ರತಿವಾದಿಯು ಪೊನ್ನಂಪೇಟೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ 2013 ರಲ್ಲಿ ದಾವಾ ಸೊತ್ತಿಗೆ ಸಂಬಂಧಪಟ್ಟ ಸರ್ವೆ ನಂ.33/7 ರ 70 ಸೆಂಟು ಹಾಗೂ ಸರ್ವೆ ನಂ.33/1 ರ 30 ಸೆಂಟು ಜಾಗಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ದಿನಾಂಕ 21.06.2014 ರಂದು ನನ್ನ ವಿರುದ್ಧ ಡಿಕ್ರಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ತೀರ್ಪಿನ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.33 ವಿಂಗಡಣೆಯಾಗಿ ಸರ್ವೆ ನಂ.33/1 ರಿಂದ 33/9 ಎಂದು ಆಗಿರುವ ಬಗ್ಗೆ ದಾವೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. ಆದ್ದರಿಂದ ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೇ ಸ ಇ ಎ ಒ.
ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.

(ಸಾಕ್ಷಿದಾರರ ಸಹಿ)